## ರೈಲು ಬಿಡ್ಬೇಡ

‘ಏ... ಬರ್ತೀಯೇನೋ ಗುಂಡ ನನ್ನ ಜೊತೆ ನನ್ನ ರೈಲು ಪ್ರಯಾಣಕ್ಕೆ’ ಅಂದ ಮಂಜ.

‘ಏಯ್, ಏನೋ ನೀನು ಹೇಳೋದು ನಿನ್ನ ರೈಲು ಅಂತ. ಸಾಕು ನೀನು ರೈಲು ಬಿಟ್ಟಿದ್ದು. ಅದು, ನನ್ನ ರೈಲು ಪ್ರಯಾಣ ಅಂತ ಅಲ್ಲ. ರೈಲಿನಲ್ಲಿ ನನ್ನ ಪ್ರಯಾಣ’ ಅಂತ ಹೇಳಬೇಕು ಕಣೋ.

ಅಂಬಾನಿಯಂಥ ಅನೇಕ ಶ್ರೀಮಂತರು ಪ್ರೈವೇಟ್ ಜೆಟ್ ಓನರ್ಸ್ ಇರ್ತಾರೆ. ಪ್ರೈವೇಟ್ ಹೆಲಿಕಾಪ್ಟರ್ ಒಡೆಯರು ಇರ್ತಾರೆ, ಆದ್ರೆ ರೈಲು ವಿಭಾಗ ಮಾತ್ರ ಇನ್ನೂ ಸರಕಾರದ್ದೇ ಕಣೋ. ಇನ್ನೂ ಪ್ರೈವೇಟ್ ರೈಲು ಒಡೆತನ ಯಾರಿಗೂ ಕೊಟ್ಟಿಲ್ಲ ಕಣೋ. ನನ್ನ ಹತ್ತಿರ ರೈಲು ಬಿಡಬೇಡ ಅಂದ ಗುಂಡ. ಮಂಜಣ್ಣ ಸುಸ್ತಾದ.

**ಸುಮನಾ**



---

## ನಿಮ್ಮಮ್ಮ ಸ್ಟಾರ್ ಆಗಿದ್ದಾಳೆ

ಬಾಣಂತನಕ್ಕೆ ಮಗಳೊಂದಿಗೆ ಬಂದ ಐದು ವರ್ಷದ ನನ್ನ ಮೊಮ್ಮಗಳು ತುಂಬಾ ತುಂಟಿ. ನನ್ನೊಂದಿಗೆ ಮೊಮ್ಮಗಳು ಸಹ ‘ನಿನಗಾಗಿ’ ಧಾರಾವಾಹಿ ವೀಕ್ಷಿಸುತ್ತಿದ್ದಳು.

ಅವಳ ತುಂಟಾಟಕ್ಕೆ ಮನೆಯಲ್ಲಿ ಯಾರಾದರೂ ಬ್ರೇಕ್ ಹಾಕಲು ಮುಂದಾದ ತಕ್ಷಣ, ‘ಅಮ್ಮಂಗೆ ಹೇಳ್ತೀನಿ...’ ಎಂದು ತನ್ನ ತಾಯಿಯ ಬಳಿ ದೂರು ಹೇಳಲು ಹೋಗ್ತಿದ್ದಳು. ಈಚೆಗೆ ಧಾರಾವಾಹಿ ನೋಡ್ತಿದ್ದಾಗ ನನ್ನ ಕೈಯಲ್ಲಿದ್ದ ರಿಮೋಟನ್ನು ಮೊಮ್ಮಗಳು ಕಸಿದುಕೊಂಡು ಕಾರ್ಟೂನ್ ಚಾನಲ್ ಹಾಕಿದಳು.

ನಾನು ‘ಇದೆಂಥಾ ಹುಡುಗಿ ಇದು. ಧಾರಾವಾಹಿ ನೋಡೋದಕ್ಕೆ ಬಿಡೋದಿಲ್ಲಾ’ ಎಂದು ಸಿಟ್ಟಿನಿಂದ ಮೊಮ್ಮಗಳ ಕೈ ಹಿಡಿದು ರಿಮೋಟ್ ಹಿಂಪಡೆಯಲು ಮುಂದಾದೆ. ಆಗ ಮೊಮ್ಮಗಳು ಅಮ್ಮಂಗೆ ಹೇಳ್ತೀನಿ’ ಎಂದು ಹೋಗುತ್ತಿದ್ದಂತೆ. ನೀನು ನಿಮ್ಮಮ್ಮಂಗೆ ಹೇಳಿದ್ರೆ, ‘ನಾನು ನನ್ನಮ್ಮಂಗೆ ಹೇಳ್ತೀನಿ' (ನನ್ನ ತಾಯಿಗೆ) ಎಂದು ನನ್ನ ತಾಯಿಯ ಫೋಟೋ ಕಡೆ ಕೈ ಮಾಡಿ ತೋರಿಸಿದೆ. ಅದಕ್ಕೆ ಮೊಮ್ಮಗಳು ‘ನಿಮ್ಮಮ್ಮ ಸ್ಟಾರ್’ ಆಗಿದ್ದಾಳೆ ಎಂದು ಹೇಳಿದ್ದನ್ನು ಕೇಳಿ ಚಕಿತಳಾದೆ. ಯಾರ ತಾಯಿ ಇಲ್ಲವೋ ಅವರು ನಕ್ಷತ್ರ ಆಗಿ ಆಕಾಶದಲ್ಲಿರುತ್ತಾರೆ ಎಂಬುದನ್ನು ಧಾರಾವಾಹಿಯಲ್ಲಿ ತಂದೆಯೊಬ್ಬ ಮಗಳಿಗೆ ಹೇಳಿದ್ದ.



**ಅನುರಾಧ ಟಿ.**